# ಮಾಸಾನಾಂ ಮಾರ್ಗಶೀರ್ಷೋಽಹಮ್

ಡಾ. ಕೆ.ಎಲ್. ಪ್ರಸನ್ನಾಕ್ಷಿ

**ಮಾರ್ಗಶಿರ ಮಾಸದ (ಡಿಸೆಂಬರ್-ಜನವರಿ) ವೈಶಿಷ್ಟ್ಯವನ್ನು ಹಲವು ದೃಷ್ಟಿಕೋನಗಳಿಂದ ವಿವರಿಸಿರುವ ಶ್ರೀಮತಿ ಪ್ರಸನ್ನಾಕ್ಷಿಯವರು ಮೈಸೂರು ರಾಮಕೃಷ್ಣ ಆಶ್ರಮದ ಭಕ್ತರು.**

**ಹುಟ್ಟಿದ ಜೀವಿಗಳೆಲ್ಲಾ** ಒಂದಲ್ಲಾ ಒಂದು ದಿನ ತನ್ನ ಮೂಲವನ್ನು ಹೋಗಿ ಸೇರಲೇಬೇಕು. ಹಾಗೆ ಸೇರಲು ಒಂದು ಮಾರ್ಗ ಬೇಕು. ಅಂತಹ ಮಾರ್ಗಗಳು ಜೀವಿಗಳ ಶರೀರ, ಬುದ್ಧಿ, ಮನೋಬಲಗಳನ್ನಾಧರಿಸಿ ಅನೇಕ ಇವೆ. ಅವುಗಳಲ್ಲಿ ಭಗವಂತನ ಉಪಾಸನಾ ಮಾರ್ಗವೂ ಒಂದು. ಭಗವಂತನನ್ನು ಉಪಾಸಿಸಬೇಕಾದರೆ ಭಗವದನುಗ್ರಹ ಬೇಕು. ಯಮೇವೈಷ ವೃಣುತೇ ತೇನ ಲಭ್ಯಃ—ಯಾರನ್ನು ಅವನು ಆರಿಸಿಕೊಳ್ಳುವನೋ ಅವರಿಗೇ ಅವನು ಲಭ್ಯನು ಎಂದು ಕಠ ಉಪನಿಷತ್ತು (೨/೨೩) ತಿಳಿಸುತ್ತದೆ. ಭಗವಂತನನ್ನು ಪೂರ್ತಿ ಬಲ್ಲವನು ಭಗವಂತನೇ ಹೊರತು ಮತ್ತೊಬ್ಬನಿಲ್ಲ. ಆದುದರಿಂದ ಅವನನ್ನು ನಾವು ಕಾಣಲು ಅವನ ಅನುಗ್ರಹವೇ ಬೇಕು. ಅದಕ್ಕಾಗಿ ಅರ್ಜುನ—"ಯಾವ ಯಾವ ಭಾವಗಳಿಂದ ನಿನ್ನನ್ನು ಚಿಂತಿಸಲಿ, ಯಾವ ರೂಪದಲ್ಲಿ ನಿನ್ನ ಧ್ಯಾನ ಮಾಡಲಿ"—ಎಂದು ಭಗವಂತನನ್ನು ಬೇಡುತ್ತಾನೆ. ಆಗ ಭಗವಂತ ತಾನು ಎಲ್ಲ ಪ್ರಾಣಿಗಳ ಅಂತಸ್ಸತ್ತ್ವ, ಚೈತನ್ಯರೂಪಿ, ತಾನೇ ಎಲ್ಲದರ ಆದಿ, ಮಧ್ಯ, ಅಂತ್ಯ. ತನ್ನ ವಿಭೂತಿ ಮಾತಿಗೆ ನಿಲುಕದಂತಹುದು, ಅನಂತವಾದುದು ಎಂದು ತಿಳಿಸುವನು. ತನ್ನನ್ನು ಆರಾಧಿಸಲು ವಸ್ತು ವಿಶೇಷಗಳನ್ನು ತನ್ನ ಚಿಹ್ನೆಗಳಾಗಿ ಹೇಳುತ್ತಾ ಮಾಸಾನಾಂ ಮಾರ್ಗಶೀರ್ಷೋಽಹಮ್ ಎಂದು ತಿಳಿಸುತ್ತಾನೆ.

ಈ ರೀತಿ ಉತ್ತಮವಾದುದು, ಉತ್ಕೃಷ್ಟವಾದುದೆಲ್ಲಾ ತನ್ನ ತೇಜೋಽಂಶಗಳೆಂದು ಭಗವಂತನೇ ಸಾರುವುದು ಸರಿಯೇ? ಸೃಷ್ಟಿ ಅವನದೇ ಅಲ್ಲವೇ? ವಿಶ್ವದ ಒಳ ಹೊರಗೆ ಎಲ್ಲ ಅವನೇ ಇರುವನೆಂದಾದಮೇಲೆ, ಅವನ ಸೃಷ್ಟಿಯದೇ ಒಂದು ಅಂಶವಾದ ಕೆಲವನ್ನು ಮಾತ್ರ "ನಾನು" ಎಂದು ಹೇಳಿದಾಗ ಅವನ ಸೃಷ್ಟಿಗೆ ಅವನೇ ಅಪಚಾರ ಮಾಡಿದಂತಲ್ಲವೇ? ಎಂಬ ಪ್ರಶ್ನೆ ಬರುವುದು ಸಹಜ. ಸೃಷ್ಟಿಯೆಲ್ಲವೂ ಪಂಚಭೂತ ಮತ್ತು ಅವುಗಳ ತನ್ಮಾತ್ರಗಳಿಂದಲೇ ಆಗಿದ್ದರೂ ಒಂದೊಂದರಲ್ಲಿ ಒಂದೊಂದು ಹೆಚ್ಚು ಘನವಾಗಿರುತ್ತದೆ. ಆದುದರಿಂದ ಆ ಘನವಾದ ವಸ್ತು ಯಾವ ಒಂದು ಗುಣಾಂಶವನ್ನು ಹೆಚ್ಚಾಗಿ ಹೊಂದಿರುತ್ತದೋ ಆ ಗುಣದ ಸ್ವಭಾವ ಅದರಲ್ಲಿ ಹೆಚ್ಚು ಪ್ರಕಟವಾಗುತ್ತದೆ. ಸತ್ತ್ವಪ್ರಧಾನವಾದುದಾಗಿದ್ದರೆ ಸಾತ್ತ್ವಿಕಗುಣದ ಆಧಿಕ್ಯವೂ, ರಜಸ್ಸು ಪ್ರಧಾನವಾಗಿದ್ದರೆ ರಜೋಗುಣದ ಆಧಿಕ್ಯವೂ ಅವುಗಳ ಪ್ರಭಾವವಾದ ದಯೆ, ಶಾಂತಿ, ದಂಭ, ಅಹಂಕಾರ ಇತ್ಯಾದಿಗಳೂ ಕ್ರಮವಾಗಿ ಜೀವಿಗಳಲ್ಲಿ ಪ್ರಕಟವಾಗುತ್ತವೆ. ಆದರೆ ಭಗವಂತನನ್ನು ಸೇರಲು ಸಾತ್ತ್ವಿಕಭಾವಗಳು ಸಹಕಾರಿಗಳಾಗಬಲ್ಲವೇ ಹೊರತು ರಜಸ್ತಮೋಭಾವಗಳಲ್ಲ. ಅಷ್ಟೇ ಅಲ್ಲದೆ ಭಗವಂತನೇ ಹೇಳಿರುವಂತೆ —ನ ತ್ವಹಂ ತೇಷು ತೇ ಮಯಿ—"ಎಲ್ಲವೂ ತನ್ನಲ್ಲಿವೆ ಆದರೆ ತಾನು ಅವುಗಳಲ್ಲಿಲ್ಲ." ದಂಭ ಅಹಂಕಾರಾದಿ ರಜಸ್ತಮೋಭಾವಾದಿಗಳಲ್ಲಿ ಅವನಿರುವುದಿಲ್ಲ. ಶರೀರದಲ್ಲಿ ಶರೀರಪೋಷಣೆಗೆ ರಕ್ಷಣೆಗೆ ಬೇಕಾದ ರಕ್ತಮಾಂಸ ಇತ್ಯಾದಿಗಳೂ ಇವೆ, ಅಂತೆಯೇ ಹೊರಹಾಕತಕ್ಕವುಗಳಾದ ಮಲ ಮೂತ್ರಗಳೂ ಇವೆ. ಅವು ಶರೀರದಲ್ಲೇ ಉಳಿದರೆ ಹಾನಿಕಾರಕಗಳು. ಅಂತೆಯೇ ಕಾಮ ಕ್ರೋಧಾದಿಗಳು—ವಿದ್ಧ್ಯೇನಮಿಹ ವೈರಿಣಂ—ಎಂಬ ಭಗವದಾದೇಶದಂತೆ—ಅವನನ್ನು ಹೊಂದಲಾಗದಂತೆ ತಡೆಯುವ, ನಮ್ಮ ಅಭಿವೃದ್ಧಿಗೆ ಪ್ರತಿಬಂಧಕವಾದ ವೈರಿಗಳು.

ಈ ಹಿನ್ನೆಲೆಯಲ್ಲಿ ಸೃಷ್ಟಿಯಲ್ಲಿರುವ ಎಲ್ಲವೂ ಭಗವಂತನಲ್ಲಿದ್ದರೂ, ಎಲ್ಲವೂ ಅವನನ್ನು ಸೇರಿಸಬಲ್ಲಂತಹ ಮಾರ್ಗಗಳಾಗಲಾರವು. ಆದುದರಿಂದ ಅವನನ್ನು ಹೊಂದಲು ಯಾವುದು ಮಾರ್ಗವಾಗಬಲ್ಲುದೋ ಅಂತಹುದನ್ನು ಆಶ್ರಯಿಸಬೇಕು ಎಂಬುದಷ್ಟೇ ಇಲ್ಲಿ ಭಗವಂತನ ಅಭಿಪ್ರಾಯ. ದೇವಾಲಯಕ್ಕೆ ಹೋಗಬೇಕು, ಭಗವಂತನನ್ನು ಕಾಣಬೇಕು ಎನ್ನುವವನು ಅದನ್ನು ತಲುಪಲು ಬೇಕಾದ ದಾರಿಯಲ್ಲಿ ಸಾಗಬೇಕಲ್ಲವೇ? ಅದಕ್ಕೆ ಭಿನ್ನವಾದ ದಾರಿಯಲ್ಲಿ ಸಾಗಿದರೆ...? ಆ ದಾರಿ ಎಲ್ಲಿ ಸೇರುವುದೋ ಅಲ್ಲಿಗೇ ನಮ್ಮನ್ನು ಸೇರಿಸುವುದು. ಭಗವಂತನನ್ನು ಸೇರಿಸುವ ಅಂತಹ ಮಾರ್ಗಗಳಲ್ಲಿ ಈ ಮಾರ್ಗಶಿರ ಮಾಸವೂ ಒಂದು. ಇದು ಅವನ ಉಪಾಸನೆಗೆ ಸಹಕಾರಿಯಾದ ಮಾಸ.

ಹಾಗಾದರೆ ಇದರ ವೈಶಿಷ್ಟ್ಯವೇನು? ಭಗವದಂಶ ಹೇಗೆ ಈ ಮಾಸದಲ್ಲಿ ಹೆಚ್ಚು ಪ್ರತಿಫಲಿತವಾಗಿದೆ ಎಂಬುದನ್ನು ಗಮನಿಸೋಣ. ಈ ಮಾಸದ ವೈಶಿಷ್ಟ್ಯವನ್ನು ಕೆಲವು ಹಿನ್ನೆಲೆಗಳಲ್ಲಿ ಗುರುತಿಸಬಹುದು.

ಆಧ್ಯಾತ್ಮಿಕ ಹಿನ್ನೆಲೆ : ಈ ಮಾಸ ದಕ್ಷಿಣಾಯನದಲ್ಲಿ ಬರುತ್ತದೆ. ದಕ್ಷಿಣಾಯನ ವಿಸರ್ಗಕಾಲ, ಸೌಮ್ಯಶಕ್ತಿ ಪ್ರವರ್ಧಮಾನವಾಗುವ ಕಾಲ. ಶರೀರದ ಬಲವೃದ್ಧಿಗೆ ಸಹಕಾರಿಯಾದ ಕಾಲ. ಈ ಕಾಲದಲ್ಲಿ ಹೊರಮುಖನಾಡಿಗಳು ಕುಗ್ಗಿ (ಸಂಕುಚಿತಗೊಂಡು) ಒಳಮುಖನಾಡಿಗಳು ಉದ್ದೀಪ್ತವಾಗಿ ಹಿಗ್ಗಿರುತ್ತವೆ. ನಾಡಿಗಳ ಇಂತಹ ಸಹಜ ಅಂತರ್ಮುಖತೆ, ಉದ್ದೀಪ್ತತೆ ಧ್ಯಾನಕ್ಕೆ ಹೆಚ್ಚು ಪೂರಕವಾದುದು. ಈ ಕಾಲದಲ್ಲಿ ಹಗಲು ಚಿಕ್ಕದಾಗಿದ್ದು ರಾತ್ರಿಯು ದೀರ್ಘವಾಗಿರುತ್ತದೆ. ಜೀವಿಗಳು ತಮ್ಮ ಬಾಹ್ಯ ಚಟುವಟಿಕೆಗಳನ್ನೆಲ್ಲಾ ಉಪಸಂಹರಿಸಿ ಅಂತರ್ಮುಖತೆಯನ್ನು ಹೊಂದುವ ಕಾಲ ರಾತ್ರಿ. ವಿಶೇಷವಾಗಿ ಭಗವಂತನ ಉಪಾಸಕನಿಗೆ, ಭಕ್ತನಿಗೆ ಬಾಹ್ಯ ಶಬ್ದ, ಅಡ್ಡಿ, ಅಡಚಣೆಗಳೆಲ್ಲಾ ದೂರವಾಗಿ ಪ್ರಶಾಂತವಾದ ಈ ವಾತಾವರಣ ಉಪಾಸನೆಗೆ ಧ್ಯಾನಕ್ಕೆ ಹಿತವಾದುದು.

ಪ್ರಾಕೃತಿಕ ಹಿನ್ನೆಲೆ : ಈ ಕಾಲದಲ್ಲಿ ಸೃಷ್ಟಿಯೆಲ್ಲವೂ ಲಯಾಭಿ **ಮುಖವಾಗುತ್ತಿರುವುದನ್ನು** ಗಮನಿಸಬಹುದು. ಹಳೆಯದೆಲ್ಲಾ ಲಯವಾಗಿ ಹೊಸತು ಮೂಡುವ ಕಾಲ. ಸೃಷ್ಟಿ ನವಚೈತನ್ಯವನ್ನು ಹೊಂದಲು ಸಿದ್ಧವಾಗುವ ಕಾಲ. ವಾತಾವರಣದಲ್ಲಿ ಜೀವಾ

ಧಾರವಾದ ಅಪ್, ವಾಯು ತತ್ತ್ವಗಳು ಹೆಚ್ಚು ಸಾಂದ್ರತೆಯಿಂದ ಕೂಡಿ ಘನೀಭವಿಸುವ ಕಾಲ. ಈ ಹಿನ್ನೆಲೆಯ ಪ್ರತಿಫಲನ ಜೀವಿಯ ಮೇಲೆ ಸಹಜವಾಗಿಯೇ ಮೂಡುವುದು. ಜೀವಿಯೂ ಅಂತರ್ಮುಖಿಯಾಗಿ ಪರಮಪುರುಷನಲ್ಲಿ ಲಯ ಹೊಂದಲು ತವಕಿಸುವಂತೆ ವಾತಾವರಣ ಪ್ರಭಾವ ಬೀರುತ್ತದೆ. ತೈತ್ತಿರೀಯ ಆರಣ್ಯಕ ಈ ಮಾಸದಿಂದ ಕೂಡಿದ ಋತುವನ್ನು ಹೀಗೆ ವರ್ಣಿಸುತ್ತದೆ— ಅಭಿಧೂನ್ವಂತೋऽಭಿಘ್ನಂತ ಇವ | ವಾತವಂತೋ ಮರುದ್ಗಣಾಃ| ಅಮುತೋ ಜೇತುಮಿಷುಮುಖಮಿವ | ಸಂನದ್ಧಾಃ ಸಹ ದದೃಶೇ ಹ | (ಪ್ರ.ಪಾ. ೧ ಅನು.೪).

ಈ ಕಾಲದಲ್ಲಿ ಮರುದ್ಗಣಗಳು ದಟ್ಟವಾದ ಸಾಂದ್ರತೆಯಿಂದ ಕೂಡಿದ ವಾಯುವುಳ್ಳದ್ದಾಗಿ, ಗುರಿಯನ್ನು ಭೇದಿಸುವ ಬಾಣದ ತುದಿಯಂತೆ ತೀಕ್ಷ್ಣವಾಗಿರುತ್ತವೆ. ಈ ವಾಯುಗಳ ಸಹಕಾರದಿಂದ ಜೀವಿಯೂ ತನ್ನ ಲಕ್ಷ್ಯವನ್ನು ಭೇದಿಸಲು ಯತ್ನಿಸುತ್ತಾನೆ ಅಥವಾ ಭೇದಿಸುವಲ್ಲಿ ಸಫಲನಾಗುತ್ತಾನೆ. (ಮುಂಡಕ ಉಪನಿಷತ್ತಿನ ೨.೨.೪ ನೇ ಮಂತ್ರವಲ್ಲಿನ ಓಂಕಾರವನ್ನೇ ಧನುಸ್ಸಾಗಿ.... ಲಕ್ಷ್ಯವನ್ನು ಭೇದಿಸುವ ರೂಪಕವನ್ನು ನಾವಿಲ್ಲಿ ಸ್ಮರಿಸಬಹುದು.)

ಆಯುರ್ವೇದದ ಹಿನ್ನೆಲೆ: ಈ ವಾಯು ಎಂಬುದು ಎಲ್ಲ ಜೀವಿಗಳಿಗೆ ಪ್ರಾಣಾಧಾರಕವಾದುದು, ಇದೇ ಬಲ, ಶರೀರವನ್ನು ಧರಿಸಿರುವ ಶಕ್ತಿ. ಈ ವಿಶ್ವವೆಲ್ಲವೂ ವಾಯುಮಯ—

ವಾಯುರಾಯುರ್ಬಲಂ ವಾಯುರ್ವಾಯುರ್ಧಾತಾ ಶರೀರಿಣಾಮ್ |
ವಾಯುರ್ವಿಶ್ವಮಿದಂ ಸರ್ವಂ ಪ್ರಭುರ್ವಾಯುಃ ಪ್ರಕೀರ್ತಿತಃ ||

ಈ ವಾಯು ಕುಪಿತವಾದರೆ ನಾನಾ ವಿಧ ರೋಗಗಳಿಗೆ ಕಾರಣನಾಗುತ್ತಾನೆ. ಮಾರ್ಗಶಿರ ಕಾಲದಲ್ಲಿ ವಾಯುವು ಶಾಂತವಾಗಿದ್ದು ಜಠರಾಗ್ನಿ ಹೆಚ್ಚು ಉದ್ದೀಪ್ತವಾಗುವಂತೆ ಮಾಡುತ್ತಾನೆ. ಹೆಚ್ಚು ತುಪ್ಪ, ತೈಲಾದಿಗಳಿಂದ ಕೂಡಿದ ಆಹಾರ ಸೇವಿಸಬೇಕು. ಹೀಗಾಗಿ ಈ ಕಾಲ ಶರೀರಪುಷ್ಟಿಗೆ ಕಾರಣವಾಗುತ್ತದೆ.

ಜ್ಯೌತಿಷಿಕ ಹಿನ್ನೆಲೆ: ಈ ಮಾಸದಲ್ಲಿನ ಹಗಲು ಹಾಗೂ ರಾತ್ರಿಗಳಲ್ಲಿರುವ ೩೦, ೩೦ ಘಳಿಗೆಗಳಲ್ಲಿ ರಾತ್ರಿಕಾಲದ ೩೦ ಘಳಿಗೆಯಲ್ಲಿ ಅಮೃತ ಘಳಿಗೆಯ ಅಂಶ ಪ್ರತಿಯೊಂದು ದಿನದಲ್ಲೂ ಹೆಚ್ಚು. ಈ ಅಮೃತ ಘಳಿಗೆಯ ಕಾಲದಲ್ಲಿ ಮಾಡಿದ ಸಕಲ ಕಾರ್ಯಗಳೂ ಸಿದ್ಧಿಸುವುವು. ಈ ಮಾಸದ ಪ್ರಧಾನ ನಕ್ಷತ್ರ ಮೃದುಗಣಕ್ಕೆ ಸೇರಿದುದಾಗಿದ್ದು ಕಾರ್ಯಸಿದ್ಧಿಗೆ ಪ್ರೇರಕವಾದ (ಭಗವತ್ಪ್ರಾಪ್ತಿಗೆ ಹೇತುವಾದ) ಅಮೃತಘಳಿಗೆ ಹೆಚ್ಚಾಗಿರುವ ಕಾಲ ಇದಾಗಿರುವುದೂ ಈ ಮಾಸದ ವೈಶಿಷ್ಟ್ಯ.

ಹೀಗೆ ಆಧ್ಯಾತ್ಮಿಕ, ಪ್ರಾಕೃತಿಕ, ಆಯುರ್ವೇದ, ಜ್ಯೌತಿಷಿಕ ಹಿನ್ನೆಲೆಗಳಲ್ಲಿ ಉತ್ಕೃಷ್ಟವಾದುದರಿಂದಲೇ ಈ ಮಾಸ ಭಗವದುಪಾಸನೆಗೆ ಹೆಚ್ಚು ಪೂರಕವಾದುದು. ಈ ಕಾರಣದಿಂದಲೇ ಈ ಮಾಸದಲ್ಲಿ ತನ್ನ ವಿಶೇಷ ಅಂಶದ ಅಭಿವ್ಯಕ್ತಿಯುಂಟೆಂದು ಭಗವಂತ ಹೇಳಿರುವುದು. ❑

ಪ್ರಿಯ ಓದುಗರಿಗೊಂದು ಸದವಕಾಶ

(ಓದುಗರ ಸ್ಪಂದನ)

# ಆದರ್ಶ ಕುಟುಂಬ

ಸಮಾಜದ ಬಹು ಮುಖ್ಯ ಘಟಕವೇ ಕುಟುಂಬ. ಸಾಮಾಜಿಕ ಸುಸ್ಥಿತಿಗೆ ವ್ಯವಸ್ಥಿತ ಕುಟುಂಬಜೀವನ ಅತ್ಯಾವಶ್ಯಕ ಎಂಬುದು ಎಲ್ಲರೂ ಒಪ್ಪಿಕೊಳ್ಳುವ ವಿಷಯ. ಆದರೆ ಇಂದಿನ ತಾಂತ್ರಿಕ ಯುಗದಲ್ಲಿ, ಧಾವಂತ ಸಮಾಜದಲ್ಲಿ ಕುಟುಂಬವ್ಯವಸ್ಥೆ ಸಡಿಲವಾಗುತ್ತಿದೆ. ಇಂದಿನ ಈ ಬದಲಾದ ಪರಿಸ್ಥಿತಿಯಲ್ಲಿ ಆದರ್ಶ ಕುಟುಂಬ ಎಂದರೆ ಹೇಗಿರಬೇಕು ಎಂಬ ವಿಷಯದ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಸಹ ಓದುಗರೊಡನೆ ಹಂಚಿಕೊಳ್ಳಿ. ಈ ವಿಷಯಕ್ಕೆ ಸಂಬಂಧಿಸಿದಂತೆ ಒಂದು ಕಿರುಪ್ರಬಂಧವನ್ನು ಬರೆದು ನಮಗೆ ಕಳುಹಿಸಿಕೊಡಿ. ಪ್ರಬಂಧವು ಸುಮಾರು ೨೦೦ ಪದಗಳ ಮಿತಿಯೊಳಗೆ ಇರಬೇಕು. ಉತ್ತಮ ಪ್ರಬಂಧಗಳನ್ನು ಆಯ್ದು ವಿವೇಕ ಪ್ರಭದಲ್ಲಿ ಪ್ರಕಟಿಸಲಾಗುತ್ತದೆ. ಪ್ರಬಂಧವು ೧೫-೧-೨೦೦೨ ರೊಳಗೆ ನಮಗೆ ತಲುಪುವಂತೆ ಕಳುಹಿಸಬೇಕು.

ಈ ಸದವಕಾಶವನ್ನು ಉಪಯೋಗಿಸಿಕೊಂಡು ನಮ್ಮೊಂದಿಗೆ ಸಹಕರಿಸುವಿರೆಂದು ಆಶಿಸುತ್ತೇವೆ.

*ಪ್ರಬಂಧವನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡಿ.*

ಸಂಪಾದಕರು,
ವಿವೇಕಪ್ರಭ, " ಓದುಗರ ಸ್ಪಂದನ "
ಶ್ರೀರಾಮಕೃಷ್ಣ ಆಶ್ರಮ, ಮೈಸೂರು.

ಆಶ್ರಮದ ವಿಶೇಷ ಕಾರ್ಯಕ್ರಮಗಳು

ಡಿಸೆಂಬರ್ 2001

**09** ಭಾನುವಾರ ಆಧ್ಯಾತ್ಮಿಕ ಶಿಬಿರ
ಮಧ್ಯಾಹ್ನ ೩ ರಿಂದ ಸಂಜೆ ೭ ರವರೆಗೆ

**24** ಸೋಮವಾರ ಸ್ವಾಮಿ ಪ್ರೇಮಾನಂದ ಜಯಂತಿ

**24** ಸೋಮವಾರ ಕ್ರಿಸ್‌ಮಸ್ ಈವ್

ಪ್ರತಿ ಗುರುವಾರ ಮತ್ತು ಭಾನುವಾರ ಕನ್ನಡದಲ್ಲಿಯೂ ಪ್ರತಿ ಶನಿವಾರ ಇಂಗ್ಲಿಷಿನಲ್ಲಿಯೂ ಸಂಜೆ 6 ರಿಂದ 7ರವರೆಗೆ ಆಧ್ಯಾತ್ಮಿಕ ಪ್ರವಚನಗಳು ಇರುತ್ತವೆ.

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ